ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರ್‌ರವರ ನ್ಯಾಯಾಲಯ, ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/04/2016-17.    ದಿನಾಂಕ: 08-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎಸ್.ಗೀತಾ ಗಂಡ ಎಂ.ಎಂ.ಚಂದ್ರಶೇಖರಯ್ಯ<br>2)ಎಂ.ಎಂ.ಚಂದ್ರಶೇಖರಯ್ಯ ತಂದೆ ಎಂ.ಎಂ.<br>ಚನ್ನಯ್ಯ<br>ಸಾಸಲವಾಡ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೂಡ್ಲಿಗಿ |
| ಕೂಡ್ಲಿಗಿ ತಾಲೂಕು ಹಿರೇಹೆಗ್ಡಾಳ್ ಗ್ರಾಮದ ಸನಂ 591ಇ/4. ವಿಸ್ತೀರ್ಣ 0-05 ಸೆಂಟ್ಸು ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಿರೇಹೆಗ್ಡಾಳ್ ಗ್ರಾಮದ ಸನಂ 591ಇ/4. ವಿಸ್ತೀರ್ಣ 0-05 ಸೆಂಟ್ಸು ಜಮೀನನ್ನು ಸದರಿ ತಾಲೂಕು ಸಾಸಲವಾಡ ಗ್ರಾಮದ ಎಂ.ಎಂ.ಚಂದ್ರಶೇಖರಯ್ಯ ತಂದೆ ಎಂ.ಎಂ.ಚನ್ನಯ್ಯ ಇವರು ದಿನಾಂಕ 03-09-2014 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಿರೇಹೆಗ್ಡಾಳ್ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 02-10-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಪಾಲು ವಿಭಾಗದ ಪತ್ರ ನೊಂದಣಿ ಇಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 10/2014-15. ದಿನಾಂಕ 03-11-2014 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 25-05-2016 ರಿಂದ 08-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಿರೇಹೆಗ್ಡಾಳ್ ಗ್ರಾಮದ ಸನಂ 591ಇ/4. ವಿಸ್ತೀರ್ಣ 0-05 ಸೆಂಟ್ಸು ಜಮೀನನ್ನು ದಿನಾಂಕ 03-09-2014 ರಂದು ನನ್ನ ಹೆಂಡತಿಯಾದ ಎಸ್. ಗೀತಾ ಇವರ ಹೆಸರಲ್ಲಿ ನನ್ನ ಸ್ವಇಚ್ಚೆಯಿಂದ ಪಾಲು ವಿಭಾಗದ ಪತ್ರ ಬರೆಯಿಸಿ ಕೊಟ್ಟಿರುತ್ತೇನೆ. ಅದರಂತೆ ಹಕ್ಕು ಬದಲಾವಣೆ ಮಾಡಲು ದಿನಾಂಕ 10-09-2014 ರಂದು ಅರ್ಜಿ ಸಲ್ಲಿಸಿರುತ್ತನೆ. ಈಗ ಸದರಿ ಜಮೀನನ್ನು ಯಥಾಸ್ಥಿತಿಯಂತೆ ಮಂದುವರೆಸಲು ಕೋರಿರುತ್ತೇನೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳೀಕೆಗಳನ್ನು ಕೇಳಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

-:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಿರೇಹೆಗ್ಡಾಳ್ ಗ್ರಾಮದ ಸನಂ 591ಇ/4. ವಿಸ್ತೀರ್ಣ 0-05 ಸೆಂಟ್ಸು ಜಮೀನನ್ನು ಅರ್ಜಿದಾರರು ಯಥಾಸ್ಥಿತಿಯಂತೆ ಮುಂದುವರೆಸಲು ಕೋರಿರುವ ಕಾರಣ ಈ ಪ್ರಕರಣವನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳೀ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 08-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ತಹಶೀಲ್ದಾರರು
ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎಸ್.ಗೀತಾ ಗಂಡ ಎಂ.ಎಂ.ಚಂದ್ರಶೇಖರಯ್ಯ. ಎಂ.ಎಂ.ಚಂದ್ರಶೇಖರಯ್ಯ ತಂದೆ ಎಂ.ಎಂ.ಚನ್ನಯ್ಯ. ಸಾಸಲುವಾಡ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೂಡ್ಲಿಗಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ತಹಶೀಲ್ದಾರರ ಕಾರ್ಯಾಲಯ * ಕೂಡ್ಲಿಗಿ. ಬಳ್ಳಾರಿ ಜಿಲ್ಲೆ *

ದೃಢೀಕೃತ ನಕಲು

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.